**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

C.C. No.3198/2024

CW-1 PW:1

ಸಾಕ್ಷಿಯ ಹೆಸರು ಃ ವೃಷಭ ತೇಲಿಸಾರ

ತಂದೆ /ಗಂಡನ ಹೆಸರು ಃ ಮನೋಜ

ವಯಸ್ಸು ಃ 25 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ.

ದಿಃ 08.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಕೊಪ್ಪಿಕರ್ ರಸ್ತೆಯಲ್ಲಿ ನನ್ನ ಮನೋಜ ಜ್ಯುವೇಲರ್ಸ ಎಂಬ ಜುವೇಲರಿ ಅಂಗಡಿ ಇದೆ. ಸದರಿ ಅಂಗಡಿಯನ್ನು ಈಗ ನಾನು ನಡೆಸುತ್ತಿದ್ದೇನೆ. ನಮ್ಮ ಅಂಗಡಿಯಲ್ಲಿ ಸುಮಾರು 16 ಜನ ಕೆಲಸ ಮಾಡುತ್ತಾರೆ. ದಿಃ 23/08/2022 ರಂದು ಸಂಜೆ 5.00 ಗಂಟೆಗೆ ಗ್ರಾಹಕರು ಬಂದಿದ್ದರು ಹಾಗಾಗಿ ಅವರಿಗೆ ನಮ್ಮ ಕೆಲಸಗಾರರು ರ್ಯಾಕ್ ನಲ್ಲಿ ಇಟ್ಟಿದ್ದ ಬಂಗಾರದ ಚೈನ್ ತೋರಿಸುತ್ತಿದ್ದರು. ಸದರಿ ಇಬ್ಬರು ಗ್ರಾಹಕರಿಗೆ ಚೈನ್ ತೋರಿಸುವಾಗ ಕೆಲಸಗಾರರು ಟ್ರೇ ತೆಗೆದುಕೊಳ್ಳಲು ಹಿಂದೆ ಮುಖ ಮಾಡಿಕೊಂಡಾಗ ಸದರಿ ಇಬ್ಬರು ಗ್ರಾಹಕರು 50.6 ಗ್ರಾಂ ತೂಕದ ಇಂಡೋ ಇಟಾಲಿಯನ್ ಮಾದರಿಯ ಬಂಗಾರದ ಚೈನ್‌ನ್ನು ಕಳುವು ಮಾಡಿಕೊಂಡು ಹೋದರು. ರಾತ್ರಿ ಸಮಯದಲ್ಲಿ ಸ್ಟಾಕ್ ಟ್ಯಾಲಿ ಮಾಡುವಾಗ ಒಂದು ಚೆನ್ ಕಡಿಮೆ ಇರುವುದು ಕಂಡುಬಂತು. ನಾವು ಅಂಗಡಿಯನ್ನು ಪರಿಶೀಲನೆ ಮಾಡಿದೆವು ಆದರೆ ಸದರಿ ಚೈನ್ ಸಿಗಲಿಲ್ಲ ಹಾಗಾಗಿ ಸಿಸಿ ಟಿವಿ ಫೂಟೇಜ್ ಪರಿಶೀಲನೆ ಮಾಡಿದೆವು ಆಗ ಚೈನ್ ಹೇಗೆ ಕಳುವು ಮಾಡಿರುತ್ತಾರೆಂದು ನನಗೆ ಗೊತ್ತಾಯಿತು ಆ ಕಾರಣಕ್ಕಾಗಿ ನಾನು ದಿಃ 24/08/2022 ರಂದು ಪೊಲೀಸರಿಗೆ ಪಿರ್ಯಾದಿ ನೀಡಿರುತ್ತೇನೆ. ಸದರಿ ಪಿರ್ಯಾದಿಯನ್ನು ನಿಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅದೇ ದಿನ ಮದ್ಯಾಹ್ನ 2.30 ಗಂಟೆಗೆ ಪೊಲೀಸರು ನಮ್ಮ ಅಂಗಡಿಗೆ ಬಂದು ಪರಿಶೀಲನೆ ಮಾಡಿ ಪಂಚನಾಮೆ ಜರುಗಿರಿಸಿರುತ್ತಾರೆ. ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾ.2 ಮತ್ತು 3 ಸಹ ಇದ್ದರು. ಸ್ಥಳವನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೊಲೀಸರು ಚಾಸಾ.2 ಮತ್ತು 3 ರವರ ಫೊಟೋ ಸಹ ತೆಗೆದಿರುತ್ತಾರೆ ಪಂಚನಾಮೆಯನ್ನು ನಿಪಿ.2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಎರಡು ಫೊಟೇಗಳನ್ನು ಕ್ರಮವಾಗಿ ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. 65(ಬಿ) ಪ್ರಮಾಣಪತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು.

2. ದಿಃ 17/11/2022 ರಂದು ಪೊಲೀಸರು ಪುನಃ ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದರು. ಅಲ್ಲಿ ಇಬ್ಬರು ಆರೋಪಿತರನ್ನು ನನಗೆ ತೋರಿಸಿದರು. ಸದರಿ ಆರೋಪಿಗಳನ್ನು ನಾನು ಗುರುತಿಸಬಹುದು. ಆರೋಪಿ ನಂ.1 ಮತ್ತು 2 ಗೈರು ಹಾಜರಿದ್ದು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆರೋಗಪಿಳನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದು ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿದ ನಂತರ ಮುಂದುವರೆದ ಮುಖ್ಯ ವಿಚಾರಣೆ ಮಾಡುವಂತೆ **ಎಪಿಪಿ ರವರಿಗೆ ಸೂಚಿಸಿ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(ಶ್ರೀಮತಿ ದೀಪಾ ಜಿ ಮನೇರಕರ)**

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.